ಕೂಡಲೇ ಮಲ್ಲಿಕಾಳನ್ನು ಕೂಡಿಹಾಕಿದ್ದ ಬೆಡ್‌ರೂಮಿನ ಬೀಗ ತೆರೆದರು. ಬಿರುಗಾಳಿಯಂತೆ ಹೊರಬಂದ ಮಲ್ಲಿಕಾ, ''ನಿಮ್ಮನ್ನೆಲ್ಲ ನೋಡಿಕೊಳ್ತೇನೆ'' ಎಂದು ಅರಚುತ್ತಾ ಕ್ಷಣಮಾತ್ರದಲ್ಲಿ ಮನೆಯಿಂದ ಹೊರಗೆ ನಡೆದಿದ್ದಳು. ಜೀಕೆ ಮತ್ತು ಮಿಲಿಟರಿ ಅಂಕಲ್ ಅವಳನ್ನು ಹಿಂಬಾಲಿಸಿ ಕಾರನ್ನೇರಿದ್ದರು. ದೊಡ್ಡ ಸಮಸ್ಯೆಯೇನಿಲ್ಲದೆ ಮಲ್ಲಿಕಾಳನ್ನು ಅಲ್ಲಿಂದ ಬಿಡಿಸಿಕೊಂಡು ಬಂದಿದ್ದರು ಜೀಕೆ.

ಆವತ್ತೇ ಸಂಜೆ ಅಪ್ಪ ಮತ್ತು ಮಗಳು ಹೋಗಿ ವಕೀಲರನ್ನು ಭೇಟಿಯಾದರು. ''ಡೈವೋರ್ಸ್ ಇಲ್ಲಾ ಸುಸೈಡ್'' ಎಂದಳು ಮಲ್ಲಿಕಾ. ''ದುಡುಕುವುದು ಬೇಡ'' ಎಂದು ಸಾಂತ್ವನ ಹೇಳಲು ಯತ್ನಿಸಿದ ವಕೀಲರಿಗೆ, ''ನಾವೆಲ್ಲ ಪ್ರಯತ್ನಿಸಿ ಆಗಿದೆ'' ಎಂದರು ಜೀಕೆ. ಕೇಸಿನ ಆಮೂಲಾಗ್ರ ವಿವರ ಕೇಳಿದ ವಕೀಲರು, ''ಕೊನೆಯ ಬಾರಿಗೊಮ್ಮೆ ಸಂಧಾನಕ್ಕೆ ಪ್ರಯತ್ನಿಸೋಣವೇ?'' ಎಂದು ಕೇಳಿದಾಗ, ''ಸಂಧಾನ? ನನ್ನ ಹೆಣದ ಮೇಲೆ'' ಎಂದಳು ಮಲ್ಲಿಕಾ. ಮಗಳ ಮಾತುಗಳಲ್ಲಿ ಪುನಃ ಡಿಪ್ರೆಶನ್ನಿನ ಸುಳಿವು ಕಂಡ ಜೀಕೆ, ''ಡೈವೋರ್ಸ್ ಕೊಡಿಸಿ ಸರ್... ಅದೇ ಶಾಶ್ವತ ಪರಿಹಾರ'' ಎಂದರು. ವಕೀಲರು ಒಪ್ಪಿದರು. ಡೈವೋರ್ಸು ನೋಟಿಸು ಕೊಟ್ಟ ಸಂಭ್ರಮದಲ್ಲಿ ಮನೆಗೆ ಹಿಂದಿರುಗಿ ಬಂದು ತನ್ನಿಷ್ಟದ ಹೋಳಿಗೆ ಆರ್ಡರ್ ಮಾಡಿದ್ದಳು ಮಲ್ಲಿಕಾ. ''ಅಪ್ಪ, ಕಾರ್ತಿ ಮೊನ್ನೆ ಹೇಳಿದ್ದೇನು ಗೊತ್ತೆ? ನೀವು ಗೌರಿ ಆಂಟಿಯನ್ನು ಮನೆಯಲ್ಲಿ ಇರಿಸಿಕೊಂಡದ್ದಂತೆ. ಅವರ ಪ್ರೇಮಪಾಶದಲ್ಲಿ ಸಿಲುಕಿದ್ದೀರಂತೆ. ಫ್ಲ್ಯಾಟು ಅವರಿಗೇ ಕೊಡುತ್ತೀರಂತೆ. ಅದನ್ನು ತಪ್ಪಿಸಲು ನಾನು ನಿಮ್ಮ ಬಳಿ ಬಂದು ಫ್ಲ್ಯಾಟು ನನಗೆ ಬರೆದುಕೊಡು ಅನ್ನಬೇಕಂತೆ. ಯಾವುದೇ ಕಾರಣಕ್ಕೆ ಫ್ಲ್ಯಾಟಿನ ಬಗ್ಗೆ ನಿನ್ನಲ್ಲಿ ಮಾತನಾಡುವುದಿಲ್ಲ ಅಂದೆ ನಾನು. ಅದಕ್ಕೇ ರೂಮಿನ ಬೀಗ ಹಾಕಿದ್ದ. ಒಟ್ಟಾರೆ ತೊಲಗಿತು ಶನಿ. ಹೋಳಿಗೆ ತಿನ್ನುತ್ತಿದ್ದೇನೆ ಅದಕ್ಕೆ'' ಎಂದಿದ್ದಳು ಮಗಳು. ಅವಳ ಭವಿಷ್ಯದ ಚಿಂತೆ ತಲೆತುಂಬಾ ಆವರಿಸಿದ್ದರೂ ಆಕೆಯ ಸಂಭ್ರಮಾಚರಣೆಯಲ್ಲಿ ಜೀಕೆ ಆತಂಕದಿಂದಲೇ ಪಾಲ್ಗೊಂಡಿದ್ದರು.

ಮಲ್ಲಿಕಾ ಬಿಲ್ಡಿಂಗಿಗೆ ಹಿಂತಿರುಗಿದ್ದು ಕ್ಷಣದಲ್ಲಿ ಸುದ್ದಿಯಾಯಿತು. ಡೈವೋರ್ಸ್ ಅಂತೆ ಎನ್ನುವುದು ವಿಶೇಷ ಕುತೂಹಲಕ್ಕೆಡೆ ಮಾಡಿಕೊಟ್ಟಿತು. ಮಲ್ಲಿಕಾಳ ವಿವಾಹ ಸಂಬಂಧ ಕುದುರಿಸಿದ್ದ ಮುನ್ನೂರ ಮೂರರ ಇಂದಿರಾ ಕೂಡಲೇ ಅಕ್ಕನಿಗೆ ಫೋನ್ ಮಾಡಿ ಅಲ್ಲಿಂದ ಘಟನೆಯ ಎಲ್ಲ ವಿವರಗಳನ್ನೂ ಪಡೆದು, ಇಲ್ಲಿಯ ವಿವರಗಳನ್ನು ಕೊಟ್ಟು ಎಲ್ಲವನ್ನೂ ತಮಗೆ ಬೇಕಾದಂತೆ ತಿರುಚಿ ಬಿಲ್ಡಿಂಗಿನ ಎಲ್ಲ ಹೆಂಗಸರಿಗೂ ಹಂಚಿದರು.

ಸೊಸೈಟಿಯ ಕೆಲ ಹೆಂಗಸರಿಗೂ ಮಲ್ಲಿಕಾಳಿಗೂ ಮೊದಲಿನಿಂದಲೂ ಅಷ್ಟಕ್ಕಷ್ಟೆ. ಕಾಲೇಜಿಗೆ ಹೋಗುತ್ತಿದ್ದಾಗಲೂ ಅವಳ ಹಿಂದೆಯೇ ಕಟ್ಟಡದ ಗೇಟಿನ ವರೆಗೂ ಬರುವ ಪಡ್ಡೆ ಹುಡುಗರನ್ನು ದುರುಗುಟ್ಟಿ ನೋಡುತ್ತಿದ್ದರು. ಮಲ್ಲಿಕಾಳನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಜೀಕೆ ಮತ್ತವರ ಪತ್ನಿಯಲ್ಲಿ, ''ನಿಮ್ಮ ಮಗಳಿಗೆ ಸ್ವಲ್ಪ ಬುದ್ಧಿ ಹೇಳಿ'' ಎನ್ನುತ್ತಿದ್ದರು. ಜೀಕೆ ಮತ್ತು ಅವರ ಪತ್ನಿ ಮುಗುಳ್ನಕ್ಕು ಸುಮ್ಮನಾದರೆ ಮಲ್ಲಿಕಾ, ''ನಾನು ಕರೆದು ಅವರು ಬಂದದ್ದಾ? ಸಾಧ್ಯವಾದರೆ ಅವರಿಗೆ ನಾಲ್ಕು ಬಾರಿಸಿ ನೋಡುವಾ'' ಎಂದು ಬೆನ್ನುಹಾಕಿ ಹೊರಟು ಬಿಡುತ್ತಿದ್ದಳು. ಮಿಲಿಟರಿ ಅಂಕಲ್ ಮಾತ್ರ, ''ಮಲ್ಲಿಕಾ... ಯಾವ ಹುಡುಗನಾದ್ರೂ ಉಪದ್ರ ಕೊಟ್ರೆ ಹೇಳು, ಅವನ ಚಳಿ ಬಿಡಿಸ್ತೀನಿ. ಹೇಗೂ ರಿಟಾಯರ್ ಆದಮೇಲೆ ಸೆಣಸಾಟ ಇಲ್ಲದೆ ಕೈ ತುರಿಸುತ್ತಿದೆ'' ಎಂದಿದ್ದರು. ಅಭಿಜಾತ ಮತ್ತು ಮಲ್ಲಿಕಾಳ ಲವ್ ಬಗ್ಗೆ ಬಿಲ್ಡಿಂಗಿನ ಗೋಡೆಗಳಲ್ಲಿ ಯಾರೋ ಕಮೆಂಟುಗಳನ್ನು ಹಾಕಿದ್ದರು. ಕೋಪಗೊಂಡ ಜೀಕೆ ಇಡೀ ಬಿಲ್ಡಿಂಗಿನ ಎಲ್ಲರನ್ನೂ ಪೊಲೀಸ್ ಸ್ಟೇಶನ್ನಿಗೆ ಎಳೆಯುತ್ತೇನೆ ಎಂದು ಗರ್ಜಿಸಿದ್ದರು. ಇವೆಲ್ಲ ಗೊತ್ತಿದ್ದೂ, ''ಮಲ್ಲಿಕಾ ಒಬ್ಬಳೇ ಮಗಳು, ಮೂರು ಬೆಡ್‌ರೂಮಿನ ಫ್ಲ್ಯಾಟು, ಅಮ್ಮನ ಬಂಗಾರ, ಅಪ್ಪನ ಇನ್ನಿತರ ಹಣಕಾಸು ಎಲ್ಲ ಮಗಳಿಗೇ ಬರುತ್ತೆ'' ಎಂದು ಮದುವೆ